

ನ್ಯೂಟನ್ನನ ಶಯ್ಯಾಗೃಹ



ಸೇಬಿನ ಮರದಡಿ ಸೇರಿದ ಕಾರ್ಯಕರ್ತರು, ಬಲ ತುದಿಯಲ್ಲಿ ಸ್ವಯಂ ಸೇವಕ ರಿಚರ್ಡ್ ಫೇರ್ ಹೆಡ್

ಕಾರಿನಲ್ಲಿ ಕರೆದುಕೊಂಡು ಹೋದರು. ಈ ಬಾರಿ ಒಂದು ವಿಶೇಷವಿತ್ತು. ನಾನು ಬರೆದು 2017ರಲ್ಲಿ ಬೆಂಗಳೂರಿನ 'ಪ್ರಿಸಂ ಸಂಸ್ಥೆ'ಯ ಮೂಲಕ ಪ್ರಕಟಿಸಿದ ಇಂಗ್ಲಿಷಿನ **'Isaac Newton'** ಪುಸ್ತಕದ 100 ಪ್ರತಿಗಳನ್ನು ಮ್ಯೂಸಿಯಂಗೆ ಕೊಡುಗೆಯಾಗಿ ನೀಡಲು ನಾವು ಬಂದಿದ್ದೆವು. ಅವುಗಳನ್ನು ಮಾರಿ ಬಂದ ಹಣವನ್ನು ನಮ್ಮ ಕಾಣಿಕೆಯಾಗಿ ಸ್ವೀಕರಿಸಬೇಕೆಂದು ವ್ಯವಸ್ಥಾಪಕಿ, ಮಿಯಾ ರೈಸ್ ಅವರನ್ನು ಕೇಳಿಕೊಂಡಿದ್ದೆ. ಅವರು ಒಪ್ಪಿದ್ದರು. ಹೀಗಾಗಿ ಪ್ರಕಾಶಕರು ಪುಸ್ತಕದ ನೂರು ಪ್ರತಿಗಳನ್ನು ಅವರಿಗೆ ನೇರವಾಗಿ ಕಳುಹಿಸಿದ್ದರು. ನಾವು ಹೋಗಿ ಅವನ್ನು ವಿಧ್ಯುಕ್ತವಾಗಿ ಅರ್ಪಿಸುವ ಯೋಜನೆ ಇತ್ತು.

ನಾವು ವುಲ್ಸ್ ಥೋರ್ಪ್ ಮ್ಯಾನರ್ ತಲುಪಿ, ಮುಖ್ಯದ್ವಾರದಲ್ಲಿದ್ದ ಕಚೇರಿಯಲ್ಲಿ ನಾವು ಬಂದ ಉದ್ದೇಶವನ್ನು ತಿಳಿಸಿದೆವು. ಒಮ್ಮೆಗೆ ಅಲ್ಲಿದ್ದ ಅಧಿಕಾರಿ ಫೋನ್ ಮಾಡಿದರು. ಉತ್ತರರೂಪದಲ್ಲಿ ಮ್ಯೂಸಿಯಂನ ಸಿಬ್ಬಂದಿಗಳೆಲ್ಲಾ ಧಾವಿಸಿ ಬಂದು ನಮಗೆ ಹಲೋ ಹೇಳಿದರು. ಎಲ್ಲರಿಗೂ ಏನೋ ಸಂತೋಷ.

ಅಲ್ಲಿಯೇ ಇರುವ ಚರಿತ್ರಾರ್ಹ ಸೇಬಿನ ಮರದ ಬಳಿಗೆ ಎಲ್ಲರನ್ನೂ ಕರೆದು ನಾವು ತೆಗೆದುಕೊಂಡು ಹೋಗಿದ್ದ ಪುಸ್ತಕದ ಪ್ರತಿಗಳನ್ನು ಹಂಚಿದೆವು. ಹೀಗೆ ಬಂದಿದ್ದವರಲ್ಲಿ ರಿಚರ್ಡ್ ಫೇರ್ ಹೆಡ್ ಒಬ್ಬರು. ಅವರು ಭೌತ ವಿಜ್ಞಾನ ಪರಿಣತರು ಮತ್ತು ದಕ್ಷ ಗೈಡ್. ಮ್ಯೂಸಿಯಂಗೆ ಬರುವ ವೀಕ್ಷಕರಿಗೆ ಸೇಬಿನ ಮರದ ಕೆಳಗೆ ನಿಂತು ಅದರ ಮಹತ್ವವನ್ನು ತಿಳಿಸುವುದು ಅವರಿಗೆ ಬಹು ಪ್ರಿಯ. ನಮಗೂ ಒಂದು ಕಿರುಭಾಷಣವನ್ನು ಕೊಟ್ಟರು.

ನ್ಯೂಟನ್ ಮತ್ತು ಸೇಬು ವಿಜ್ಞಾನದ ರಂಜಕ ಕಟ್ಟುಕಥೆಗಳಲ್ಲಿ ಒಂದು ಎಂಬುದು ಕೆಲವು ತಜ್ಞರ ಅಭಿಪ್ರಾಯ. ಆದರೆ ಜನರ ಪಾಲಿಗೆ ಅದೊಂದು ಮಹಾ ಸ್ಮಾರಕವಾಗಿದೆ, ಸಂಕೇತವಾಗಿದೆ. ಆ ಮರ ಅನೇಕ ಬಾರಿ ಸೀಳಿಹೋಗಿ, ಮತ್ತೆ ಮತ್ತೆ ಬೆಳೆದು ನಿಂತಿದೆ. ಅದರ ಚೂರುಗಳನ್ನು ಸಾವಿರಾರು ಜನ ನೆನಪಿಗಾಗಿ ಕೊಂಡೊಯ್ದಿದ್ದಾರೆ. ಒಂದು ತುಣುಕನ್ನು ಬಾಹ್ಯಾಕಾಶಕ್ಕೂ ಕಳುಹಿಸಲಾಗಿದೆ.

ನಾವು ಔಪಚಾರಿಕವಾಗಿ ನನ್ನ ಪುಸ್ತಕದ ಒಂದು ಪ್ರತಿಯನ್ನು ಮ್ಯೂಸಿಯಂಗೆ ಕೊಟ್ಟೆವು. ಆಗ ಅಲ್ಲಿನ ಕಾರ್ಯಕರ್ತೆ ಹೇಳಿದರು: 'ನೀವು ಕಳುಹಿಸಿದ ಪ್ರತಿಗಳು ಒಂದು ತಿಂಗಳ ಹಿಂದೆ ಬಂದವು. ಅವುಗಳಲ್ಲಿ 50 ಆಗಲೇ ಮಾರಾಟವಾಗಿವೆ. ಮಿಕ್ಕವನ್ನು ಒಳಗೆ ಪ್ರದರ್ಶನ ಮಾಡಿದ್ದೇವೆ.' ಅವರ ಮಾತು ಕೇಳಿ ಸಂತೋಷಪಟ್ಟೆ.



ಗ್ರಾಂಥಾಮ್ ಪಟ್ಟಣದಲ್ಲಿ ವಿದ್ಯಾರ್ಥಿಯಾಗಿದ್ದಾಗ ನ್ಯೂಟನ್ ನೆಲೆಸಿದ್ದ ಮನೆ

ನಾವು ಮ್ಯೂಸಿಯಂನ ಒಳ ಪ್ರವೇಶಿಸಿ ಸುತ್ತಾಡಿದೆವು. ಒಂದು ಪ್ರಮುಖ ಸ್ಥಳದಲ್ಲಿ ನನ್ನ ಪುಸ್ತಕಗಳನ್ನು ಇಟ್ಟು, ಪಕ್ಕದಲ್ಲಿ ಒಂದು ಫಲಕವನ್ನು ಇಟ್ಟಿದ್ದಾರೆ, ಅದರಲ್ಲಿ ನನ್ನ ಬಗ್ಗೆ ಮತ್ತು ಪುಸ್ತಕದ ಬಗ್ಗೆ ತಿಳಿಸಿದ್ದಾರೆ. ಬಯಸಿದವರು ಪ್ರತಿಯೊಂದನ್ನು ತೆಗೆದುಕೊಂಡು ತಮಗೆ ಸಾಧ್ಯವಾದಷ್ಟು ಕಾಣಿಕೆಯನ್ನು ನೀಡಬಹುದು. ನಾನು ಅಲ್ಲಿದ್ದಾಗ ನಾಲ್ಕು ಪ್ರತಿಗಳು ಮಾರಾಟವಾದವು. ಕೊಂಡವರು ನನ್ನ ಹಸ್ತಾಕ್ಷರ ಪಡೆದರು. ನನ್ನ ಕನ್ನಡದ ಕಿರುಪುಸ್ತಕ 'ಐಸಾಕ್ ನ್ಯೂಟನ್' ಕೂಡ ಮ್ಯೂಸಿಯಂನ ಪ್ರದರ್ಶನದಲ್ಲಿದೆ.

ಎಂದಿನಂತೆ ಅಲ್ಲಿಯ ಪ್ರತಿ ಕೊಠಡಿಯನ್ನೂ ನೋಡಿದ್ದಾಯಿತು. ನ್ಯೂಟನ್ ತನ್ನ ಬೆಳಕಿನ ಪ್ರಯೋಗ ಮಾಡಿದ ಸ್ಥಳವನ್ನು ಈಗ ತುಸು ಬದಲಾಯಿಸಿದ್ದಾರೆ. ರಿಚರ್ಡ್ ವರ್ಣಿಸಿದರು: 'ನ್ಯೂಟನ್ ಕಿಟಕಿಯ ಮೂಲಕ ಬೆಳಕನ್ನು ಹರಿಯಬಿಟ್ಟ. ಮಧ್ಯೆ ಪಟ್ಟಕ. ಏಳು ಬಣ್ಣಗಳನ್ನು ಪ್ರದರ್ಶಿಸಿದ ಗೋಡೆ ಕಿಟಕಿಯಿಂದ 18 ಅಡಿ ದೂರವಿದೆ. ನ್ಯೂಟನ್ನನ ವ್ಯಾಸಂಗದ ಕೋಣೆ ಇದು. ಅಲ್ಲದೆ ಅವನ ಶಯ್ಯಾಗೃಹವೂ ಪಕ್ಕದಲ್ಲಿಯೇ ಇದೆ'.

ನಾವು ಲಂಡನ್ನಿಗೆ ಹಿಂತಿರುಗುವಾಗ ಹತ್ತಿರವೇ ಇರುವ ಗ್ರಾಂಥಾಮ್ ಪಟ್ಟಣದ ಮೂಲಕ ಬಂದೆವು. ಅಲ್ಲಿ ನ್ಯೂಟನ್ ಓದಿದ ಪ್ರಾಥಮಿಕ ಶಾಲೆ ಮತ್ತು ಅವನು ಇಲ್ಲಿ ಓದುವಾಗ ಇದ್ದ ಮನೆ ಎಲ್ಲವನ್ನೂ ಮತ್ತೆ ನೋಡಿದೆವು.

ಮನುಕುಲ ಕಂಡ ಮಹಾನ್ ಮೇಧಾವಿಗಳಲ್ಲಿ ಒಬ್ಬರಾದ ನ್ಯೂಟನ್ ಅವರನ್ನು ಬಾಲ್ಯದಲ್ಲಿ ಅವರ ತಾಯಿ ಹಾನಾ, ಶಾಲೆ ಬಿಡಿಸಿ ಕುರಿ ಕಾಯುವ ಕೆಲಸಕ್ಕೆ ಹಾಕಿದ್ದಳು ಎಂಬುದು ವಿಚಿತ್ರ, ಆದರೂ ಸತ್ಯ. ಮುಖ್ಯೋಪಾಧ್ಯಾಯರು ಬಲವಂತ ಮಾಡಿ ಬಾಲಕನನ್ನು ಮತ್ತೆ ಶಾಲೆಗೆ ಕರೆತಂದರು. ಅವರು ಹಾಗೆ ಮಾಡದೆ ಹೋಗಿದ್ದರೆ?

ಪ್ರತಿಕ್ರಿಯಿಸಿ: **feedback@sudha.co.in**